ಅಳಿಯ ಕೋಪದಿಂದ, ''ಏನು, ಮಗಳನ್ನು ನಿಮ್ಮ ಮನೆಯಲ್ಲೇ ಇಟ್ಟುಕೊಳ್ಳುವ ಇರಾದೆಯಾ?'' ಎಂದು ಕೇಳಿದಾಗ, ''ಅದನ್ನು ಕೇಳುವವ ನೀನ್ಯಾರು?'' ಎಂದು ಮುಖಕ್ಕೆ ಹೊಡೆದ ಹಾಗೆ ಹೇಳಿ. ''ನನಗೂ ಯಾರಿಲ್ಲ, ನನ್ನ ಮಗಳು ನನ್ನೊಂದಿಗೇ ಇಲ್ಲೇ ಇರುತ್ತಾಳೆ. ನೀನು ಅವಳ ಮಾತು ಬಿಟ್ಟುಬಿಡು. ಹಾಗೆಯೇ ನನ್ನ ಫ್ಲ್ಯಾಟಿನ ಮೇಲಿನ ಆಸೆಯನ್ನೂ ಬಿಡು. ಇನ್ನೊಬ್ಬರ ಸಂಪತ್ತಿಗೆ ಜೊಲ್ಲು ಸುರಿಸಿ ಕಾಯುವ ನಾಯಿ...'' ಎಂದು ಫೋನಿಟ್ಟು ಮಗಳ ನೋವಿನ ಸೇಡು ತೀರಿಸಿಕೊಂಡಿದ್ದರು. ನಾನು ಕಷ್ಟದಲ್ಲಿದೇನೆ ಎಂದು ಮಗಳು ಹೇಳಿದಾಗ ಅಪ್ಪ ತನ್ನ ಮಗಳ ಬೆಂಬಲಕ್ಕೆ ನಿಲ್ಲುವುದು ಅಪರಾಧ ಅಲ್ಲವಲ್ಲ. ಅದು ಬಿಟ್ಟು ಬೇರಿನ್ನೇನೂ ನಡೆದೇ ಇಲ್ಲ. ಮತ್ತೆ ಇವರ್‍ಯಾಕೆ ಕರೆದಿದ್ದಾರೆ? ಈ ಸೊಸೈಟಿಯವರಿಗೆ ಏನಾಗಿದೆ? ನನ್ನ ಖಾಸಗಿ ಸಮಸ್ಯೆಗಳ ಬಗ್ಗೆ ಇವರಿಗೇಕೆ ಇಷ್ಟು ಆಸಕ್ತಿ? ಆಲೋಚಿಸುತ್ತ ಕುಳಿತರು ಜೀಕೆ.

ಕಳೆದ ಬಾರಿ ಜೀಕೆಯವರನ್ನು ಕಮಿಟಿಯವರು ಕರೆದದ್ದು ಸರಿಸುಮಾರು ಆರು ತಿಂಗಳ ಹಿಂದೆ.

ನೂರ ನಾಲ್ಕರ ಫ್ಲ್ಯಾಟಿನಲ್ಲಿ ಬಾಡಿಗೆಗೆ ವಾಸವಿದ್ದ ಗೌರಿಯವರನ್ನು ಕೊರೊನಾದ ಮೊದಲ ದಿನಗಳ ಲಾಕ್‌ಡೌನಿನಲ್ಲಿ ಬೈಕಿನ ಹಿಂದೆ ಕೂರಿಸಿಕೊಂಡು ಜೀಕೆಯವರು ಬ್ಯಾಂಕಿಗೆ ಕರೆದುಕೊಂಡು ಹೋಗಿ ಬಂದಿದ್ದರು. ನೂರ ನಾಲ್ಕರಲ್ಲಿ ಹತ್ತು ವರ್ಷಗಳಿಂದ ಶ್ರೀನಿವಾಸ ಅವರು ಮಡದಿ ಗೌರಿ ಮತ್ತು ಮಗ ಆನಂದ್ ಜತೆ ವಾಸವಾಗಿದ್ದರು. ನಾಲ್ಕಾರು ವರ್ಷಗಳ ಹಿಂದೆ ಶ್ರೀನಿವಾಸ ತೀರಿಕೊಂಡಿದ್ದರು. ಅವರ ಮಗ ಆನಂದನಿಗೆ ಕಂಪನಿ ತನ್ನನ್ನು ಅಮೆರಿಕಕ್ಕೆ ಪೋಸ್ಟಿಂಗ್ ಹಾಕುವ ಸುದ್ದಿ ತಿಳಿಯಿತು. ಆತುರಾತುರದಲ್ಲಿ ಮದುವೆಯಾಗಿ ಆತ ತನ್ನ ಮಡದಿಯೊಡನೆ ಅಮೆರಿಕಕ್ಕೆ ತೆರಳಿದ್ದ. ಹೀಗಾಗಿ ಗೌರಿ ಮನೆಯಲ್ಲಿ ಒಂಟಿಯಾಗಿದ್ದರು. ಜೀಕೆ ಕೂಡ ಮನೆಯಲ್ಲಿ ಒಂಟಿ ತಾನೆ, ಮೇಲಾಗಿ ಲಾಕ್‌ಡೌನ್ ಬೇರೆ. ಹಾಗಾಗಿ ಕಷ್ಟ ಸುಖ ಮಾತಾಡುತ್ತಾ, ಒಬ್ಬರಿಗೊಬ್ಬರು ನೆರವಾಗುತ್ತಾ, ಸಾರು ಸಾಂಬಾರು ಹಂಚಿಕೊಳ್ಳುತ್ತಾ ದಿನಕಳೆಯುವುದು ಶುರುವಾಗಿತ್ತು. ಲಾಕ್‌ಡೌನಿನ ಬೈಕ್ ಸವಾರಿ ಬಿಲ್ಡಿಂಗಿನ ಹಲವರ ಹುಬ್ಬೇರಿಸಿತ್ತು. ಅವರ ಮನೆಗೆ ಇವರು, ಇವರ ಮನೆಗೆ ಅವರು ಹೋಗ್ತಾ ಬರ್ತಾ ಇರ್ತಾರೆ ಎಂಬ ಸುದ್ದಿ ಅವರಿವರ ಹರಿತ ನಾಲಗೆಗೆ ಸಿಲುಕಿ, ಕೊನೆಗೊಮ್ಮೆ ಅನೈತಿಕ ಸಂಬಂಧದ ವ್ಯಾಖ್ಯಾನ ಪಡೆದುಕೊಂಡಿತ್ತು. ಈ ರೀತಿಯ ಟೀಕೆ ಟಿಪ್ಪಣಿಗಳು ಹರಿದಾಡುತ್ತಿವೆ ಎಂಬ ಸುದ್ದಿ ಜೀಕೆಯವರ ಕಿವಿಗೆ ಬಿದ್ದರೂ ಅವರು ಅದಕ್ಕೆಲ್ಲ ಸೊಪ್ಪು ಹಾಕಿರಲಿಲ್ಲ.

ಇದೇ ಸಮಯದಲ್ಲಿ ಗೌರಿಯವರ ಮನೆಮಾಲೀಕರಿಗೆ ಗೌರಿಯವರ ನಡತೆ ಬಗ್ಗೆ ಯಾರೋ ಕಿವಿಯೂದಿದ್ದಿರಬೇಕು. ಅವರು ಬಂದು ಮನೆ ಖಾಲಿ ಮಾಡಿ ಎಂದು ನೋಟಿಸು ಕೊಟ್ಟಿದ್ದರು. ಗೌರಿಯವರಿಗೆ ಇದೇ ವಠಾರದಲ್ಲಿ ಬದುಕುವಾಸೆ. ಅಲ್ಲೇ ಹತ್ತಿರದಲ್ಲಿ ಮನೆ ಹುಡುಕಲು ಆರಂಭಿಸಿದ್ದರು. ಗೌರಿಯ ಮಗ ಅಮೆರಿಕದಿಂದ ಫೋನ್ ಮಾಡಿ ಬಿಲ್ಡಿಂಗಿನ ಹಲವರಲ್ಲಿ ಮನೆ ಹುಡುಕಲು ಸಹಾಯ ಮಾಡಿ ಎಂದು ವಿನಂತಿಸಿದ್ದ. ಆಗ ನೂರ ಎಂಟರಲ್ಲಿ ವಾಸಿಸುತ್ತಿದ್ದ ಮಿಲಿಟರಿ ಅಂಕಲ್, ''ಲಾಕ್‌ಡೌನಿನಲ್ಲಿ ಮನೆ ಹುಡುಕುವುದು ಸ್ವಲ್ಪ ಕಷ್ಟ. ಬೇರೆಲ್ಲೂ ಸಿಗದಿದ್ದರೆ ಸದ್ಯಕ್ಕೆ ಮೂರು ಬೆಡ್‌ರೂಮಿನ ಮನೆಯಲ್ಲಿ ಜೀಕೆ ಒಬ್ಬರೇ ಇದಾರಲ್ಲ, ಅಲ್ಲೇ ಒಂದು ರೂಮ್ ಕೊಡುವಂತೆ ವಿನಂತಿಸುವಾ'' ಎಂದರಂತೆ. ''ಅದು ಒಳ್ಳೆ ಐಡಿಯಾ'' ಎಂದನಂತೆ ಮಗ. ಜೀಕೆ ಕೂಡ ಸಂತೋಷದಿಂದಲೇ ಒಪ್ಪಿಗೆ ನೀಡಿದ್ದರು. ಹೀಗೆ ಗೌರಿ ಜೀಕೆಯವರ ಮನೆಗೇ ಶಿಫ್ಟ್ ಆಗಿದ್ದರು. ಇದು ಮೊದಲೇ ಹರಡಿದ್ದ ಸುದ್ದಿಯ ಬೆಂಕಿಗೆ ತುಪ್ಪ ಸುರಿದ ಹಾಗಾಯಿತು. ಕಮಿಟಿಯವರಿಗೆ ದೂರುಗಳ ಸುರಿಮಳೆಯಾಯಿತು. ಹೀಗಾಗಿ, ತಪ್ಪಿತಸ್ಥನೆಂಬ ಆರೋಪ ಹೊತ್ತು ಜೀಕೆ ಕಳೆದ ಬಾರಿ ಕಮಿಟಿ ಎದುರು ಹಾಜರಾಗಿದ್ದರು. ಆಫೀಸು ತಲುಪಿದ್ದ ಜೀಕೆಯವರನ್ನು ಚಿರಪರಿಚಿತರೇ ಪ್ರಶ್ನಿಸುವಂತೆ ನೋಡಿದ್ದರು. ''ನಿಮ್ಮಲ್ಲಿ ಇದನ್ನು ಪ್ರಸ್ತಾಪಿಸುವುದು ಇಷ್ಟವಿಲ್ಲ'' ಎನ್ನುತ್ತಲೇ,